## ನಕ್ಕುಬಿಡಿ

ದಿನಪತ್ರಿಕೆಯೊಂದರಲ್ಲಿ ಒಂದು ದಿನ ಜಾಹೀರಾತೊಂದು ಪ್ರಕಟವಾಯಿತು. ನಗರದ ಖ್ಯಾತ ಉದ್ಯಮಿ ತಿಪ್ಪಣ್ಣನವರ ಏಕೈಕ ಪುತ್ರನಿಗೆ ಯೋಗ್ಯ ವಧು ಬೇಕಾಗಿದ್ದಾಳೆ. ಯಾವುದೇ ವರದಕ್ಷಿಣೆ, ವರೋಪಚಾರ ಬೇಕಾಗಿಲ್ಲ. ಆದರೆ ವಧು 'ಮುದ್ದೇಶ್ವರ ಕಾದಂಬರಿ ಕುಟುಂಬ ಸಾಮ್ರಾಜ್ಯ'ದ ನಾಯಕಿಯನ್ನು ಹೋಲುವಂತಿರಬೇಕು.

ವಾರ ಕಳೆಯುವುದರೊಳಗೆ ಐದು ವರ್ಷದಿಂದ ಮಾರಾಟವಾಗದೇ ಮೂಲೆ ಹಿಡಿದಿದ್ದ 'ಮುದ್ದೇಶ್ವರ ಕಾದಂಬರಿ ಕುಟುಂಬ ಸಾಮ್ರಾಜ್ಯ'ದ ಪ್ರತಿಗಳೆಲ್ಲ ಮಾರಾಟವಾಗಿ ಹೋದವು.

***

ವೈದ್ಯರು: ನಿಮ್ಮ ಹೊಟ್ಟೆ ಇಷ್ಟೇಕೆ ದೊಡ್ಡದಿದೆ?

ರಂಗ: ಸರ್, ಮದುವೆ ಆಗುವಾಗ, ನಮ್ಮತ್ತೆ ಅಳಿಯಂದ್ರೆ ನನ್ನ ಮಗಳು ಮಾಡಿದ ತಪ್ಪುಗಳನ್ನು ಹೊಟ್ಟೆಗೆ ಹಾಕ್ಕೊಳ್ರೀ ಅಂದಿದ್ಲು. ನನ್ಹೆಂಡ್ತಿ ಮಾಡಿದ ತಪ್ಪನ್ನೆಲ್ಲ ಹೊಟ್ಟೆಗೆ ಹಾಕ್ಕೊಂಡಿದ್ದಕ್ಕೆ ಹೀಗಾಗಿದೆ ಡಾಕ್ಟ್ರೇ.

***

ಗಂಡ: ನ್ಯೂಸ್ ಚ್ಯಾನಲ್ ಹಚ್ಚು ನಾನು ನ್ಯೂಸ್ ನೋಡ್ಬೇಕು.

ಹೆಂಡ್ತಿ: ನಾನು ಹಚ್ಚಂಗಿಲ್ಲ ಏನ್ಮಾಡ್ತಿ?

ಗಂಡ: ಹಚ್ಚಂಗಿಲ್ಲ? ನೋಡು, ನಾನೇನ್ಮಾಡ್ತೀನಿ ನನಗೇ ಗೊತ್ತಿಲ್ಲ.

ಹೆಂಡ್ತಿ: ಈಗ್ಲೂ ಹೇಳ್ತನಿ ಹಚ್ಚದಿಲ್ಲ. ಏನ್ಮಾಡ್ತೀ?

ಗಂಡ: ಏನಿಲ್ಲ. ನೀ ಹಚ್ಚೀದ ಚ್ಯಾನಲ್ ನೋಡ್ತನಿ.

***

ಕುಡುಕನೊಬ್ಬನನ್ನು ಪೊಲೀಸರು ಕೋರ್ಟಿಗೆ ಎಳೆದೊಯ್ದರು. ಅವರ ಗಲಾಟೆಯನ್ನು ಕೇಳಿದ ನ್ಯಾಯಾಧೀಶರು ಆರ್ಡರ್ ಆರ್ಡರ್ ಎಂದು ಮೇಜು ಕುಟ್ಟಿದರು.

ಇಂಥದ್ದೇ ಅಂತೇನಿಲ್ಲ ಸರ್, ಏನಾದರೂ ಕೊಡಿ ಕುಡಿಯುತ್ತೇನೆ ಎಂದು ಕೂಗಿದ ಕುಡುಕ.

***

ನಿಂಗ: ರಂಗ, ಇವತ್ತಿನ ಪೇಪರ್ ಯಾಕೆ ಮುಚ್ಚಿಡ್ತಾ ಇದ್ದೀ?

ರಂಗ: ಶ್! ನಿಧಾನಕ್ಕೆ ಮಾತಾಡು. ಇವತ್ತು ನನ್ನ ರಾಶಿ ಭವಿಷ್ಯದಲ್ಲಿ ಕಂಕಣ ಭಾಗ್ಯ ಅಂತ ಇದೆ. ಅದನ್ನು ನನ್ಹೆಂಡ್ತಿ ಓದಿ ಗೀದ್ಯಾಳೂಂತ ಮುಚ್ಚಿಡ್ತಾ ಇದೀನಿ.

***

ನಿಂಗ: ಅಮ್ಮಾ, ಒಂದು ಕೊಡೆ ಕೊಡಿಸಮ್ಮ.

ನಿಂಗನ ತಾಯಿ: ಯಾಕೋ ಮೊನ್ನೆ ಹೊಸ ರೈನ್ ಕೋಟು ಕೊಡ್ಸಿದೀನಲ್ಲ. ಮತ್ಯಾಕೆ ಕೊಡೆ?

ನಿಂಗ: ನೋಡಮ್ಮ, ಹೊಸ ರೈನ್ ಕೋಟು ಅಲ್ವಾ? ಅದು ಮಳೆಯಲ್ಲಿ ತೋಯ್ದು ಹಾಳಾಗಬಾರದೂಂತ...

***

ನಿಂಗ: ನಿನ್ನ ಫೇಸ್‌ಬುಕ್ ಖಾತೆ ನನ್ನ ಲೈಫನ್ನೇ ಹಾಳು ಮಾಡ್ತು ಮಾರಾಯಾ.

ರಂಗ: ಏನಾಯ್ತು?

ನಿಂಗ: ನಿನ್ನ ಹೆಂಡ್ತಿ ನೀ ಬಟ್ಟೆ ಒಗೆಯೋದು, ಅಡಿಗೆ ಮಾಡೋದು ಎಲ್ಲ ವಿಡಿಯೊ ಮಾಡಿ ಫೇಸ್‌ಬುಕ್‌ನಲ್ಲಿ ಹಾಕಿದ್ದಾಳೆ.


ರಂಗ: ಹಾಕಿದ್ರೇನಾಯ್ತು?

ನಿಂಗ: ಈಗ ನನ್ಹೆಂಡ್ತೀನೂ ನನಗೆ ಬಟ್ಟೆ ಒಗಿ, ಅಡಿಗೆ ಮಾಡೂಂತಾಳೆ.

***

ರಂಗ:ನಮ್ಮೂರಲ್ಲಿ ನಾಳೆ ಸಂತ್ರಸ್ತರ ಸಹಾಯಾರ್ಥ ಕುಸ್ತಿ ಆಯೋಜನೆ ಮಾಡಿದ್ದಾರೆ ನೀನೂ ಬರ್ತೀಯಾ?

ನಿಂಗ: ಒಲ್ಲೆ ಮಾರಾಯಾ. ನಮ್ಮೂರಲ್ಲೀನೂ ಕುಸ್ತಿ ನಡೀತು.




ರಂಗ: ಏನು? ಅಲ್ಲೂ ಸಂತ್ರಸ್ತರ ಸಹಾಯಾರ್ಥಕ್ಕಾಗಿ ಕುಸ್ತಿ ನಡೀತಾ?

ನಿಂಗ: ಇಲ್ಲ ಮಾರಾಯಾ. ಸರಕಾರದಿಂದ ಬಂದ ಪರಿಹಾರದ ಹಣ ತಾವೇ ಹಂಚಿಕೊಳ್ಳುವ ಸಲುವಾಗಿ!

***

ಪೊಲೀಸ್: ಬೈಕ್ ಮೇಲೆ ಮೂರು ಜನ ಹೋಗಬಾರದು ಅಂತ ಗೊತ್ತಿಲ್ವಾ

ತಿಮ್ಮ: ಗೊತ್ತು ಸಾರ್ ಅದಕ್ಕೆ ಒಬ್ಬನನ್ನು ವಾಪಸ್ ಮನೆಗೆ ಬಿಡೋಕೆ ಹೋರಟಿದ್ದೀನಿ ಸರ್.

***

ಟೀಚರ್: ರೆಕ್ಕೆಗಳಿದ್ದರೂ ಹಾರದ ಪಕ್ಷಿ ಯಾವುದು?

ಗುಂಡ: ಸತ್ತು ಹೋದ ಪಕ್ಷಿ ಮೆಡಂ.

***

ಮೇಸ್ಟ್ರು: 'ಹಿತ' ಇದರ ವಿರುದ್ಧ ಪದ ಯಾವುದು?

ಗುಂಡ: 'ವಿವಾಹಿತ' ಸರ್.

***

ಪತ್ನಿ: ಗಂಡನ ಮೇಲೆ ಸಿಟ್ಟಾಗಿ ತವರಿಗೆ ಹೋಗಿರುತ್ತಾಳೆ.

ಪತಿ: ಫೋನ್ ಮಾಡ್ತಾನೆ ಮಾವ ರಿಸಿವ್ ಮಾಡ್ತಾನೆ.

ಮಾವ: ನಿನಗೆಷ್ಟು ಸಲ ಹೇಳುವುದು ಅವಳು ಬರೋಲ್ಲ ಅಂತ ಪದೆ ಪದೇ ಫೋನ್ ಯಾಕೇ ಮಾಡ್ತಿಯಾ?

ಪತಿ: ಏನಿಲ್ಲ ಮಾವ ಕೇಳೂವುದಕ್ಕೆ ತುಂಬ ಖುಷಿ ಅನ್ನುತ್ತೆ ಅದಕ್ಕೆ.

***

ಪತ್ನಿ: ನನ್ನ ಕೂದಲು ಬಿಳಿಯಾಗ್ತಿದೆ.. ವಾಟ್ ಶುಡ್ ಐ ಡು?

ಪತಿ: ವೈ ಡೊಂಟ್ ಯು 'ಡೈ'?

***

ಕಳ್ಳ: ಒಂದು ಹೆಜ್ಜೆ ಮುಂದೆ ಇಟ್ರೂ ನಿನ್ನ ಹೆಂಡ್ತಿನ ಶೂಟ್ ಮಾಡ್ತಿನಿ.

ಗಂಡ: ನನ್ನನ್ನೇನು ಕೈಲಾಗದವನು ಅನ್ಕೊಂಡಿದಿಯಾ? ಒಂದಲ್ಲ ನಾಲ್ಕು ಹೆಜ್ಜೆ ಬರ್ತಿನಿ ನೋಡು.

(ಸಂಗ್ರಹ): ಶರದ ಕುಲಕರ್ಣಿ, ಬೀದರ್